

**ಎಡದಿಂದ ಬಲಕ್ಕೆ**

1. ಪಹರೆ ಕರ್ತವ್ಯಕ್ಕೆ ಬರಲಿಲ್ಲವೆಂದು ಹೀಗೆ ಹೊಡೆಯುವುದೇ? 3
3. ಅಕ್ಷರಗಳಲ್ಲಿ ವಿವರಿಸುವ ಬದಲು ಅಂಕಿಅಂಶಗಳನ್ನು ನಿರೂಪಿಸುವ ನಕ್ಷೆ 3
4. ಕಾಡಿನಲ್ಲಿ ಸಿಕ್ಕಿ ಬಿದ್ದವ ಮಹಾ ಕೋಪಿಷ್ಠ 3
6. ಅಕ್ಷರ ಕಲಿತಿಲ್ಲದಿದ್ದರೇನು? ಎಲ್ಲರನ್ನೂ ಕಾಪಾಡಿದವ ಅವನೇ 3
7. ಕೋವಿಯನ್ನು ಹಿಡಿದು ಬಂದನೇಕೆ ಗಣೇಶ! 4
9. ಬುವಿಗೆ ಬಂದವರಿಗೆಲ್ಲ ಭೂಮಿಯೊಡನೆ ಬಿಡಲಾರದ ನಂಟು 4
11. ಈ ಸಂಪ್ರದಾಯ ಭರಿತ ಆಚರಣೆಗೆಒಳ್ಳೆಯ ಬೆಳಗಿನ ವೇಳೆಯೇ ಸರಿ 4
13. ಆತನ ಪರಮ ಆತ್ಮೀಯ ಮಿತ್ರನ ಹೆಸರು ಲಕ್ಷ್ಮಿಯ ಗಂಡ 4
15. ಮನ್ನಿಸೆಂದು ಕೇಳಲಿಲ್ಲ. ಅದಕ್ಕೇ ಆಕೆಗೆ ಇಂಥ ಕೋಪ 3
17. ಕಂದು ಬಣ್ಣ ಇದ್ದ ವಸ್ತು ಈಗ ಸಂಪೂರ್ಣ ಕಪ್ಪು 3
18. ಆತನ ಮೂರ್ಖತನವನ್ನು ಕಂಡು ಅಯ್ಯೋ ಪಾಪ ಎನಿಸುತ್ತದೆ 3
19. ಕೈದಿಯನ್ನು ಬಿಡಿಸಲು ಹೋದವರೊಡನೆ ಭಾರೀ ಯುದ್ಧ 3

**ಮೇಲಿನಿಂದ ಕೆಳಕ್ಕೆ**

1. ಆಕೆ ಹೇಳಿದ ಪ್ರಕಾರ ಅವರ ಊರಿನಲ್ಲಿ ಬಿಸಿಲು ತುಂಬ ತೀಕ್ಷ್ಣ 3
2. ರಾಕ್ಷಸಿಯರ ನಡುವೆ ಯಾರು ಈತ ವಿಲಾಸಪ್ರಿಯ? 3
3. ಹಳ್ಳಿಯೇ ಆದರೂ ಅಲ್ಲಿ ಎಂಥ ಅದ್ಭುತ ಮನೆ! 3
5. ಕಾವ್ಯಾಲಂಕಾರ ಒಂದೂ ಅರ್ಥವಾಗದ ಮಹಾ ಪೆದ್ದ 3
7. ಮೊದಲು ಶ್ರಮವಹಿಸು; ಆ ನಂತರ ದಣಿವನ್ನಾರಿಸಿಕೋ 4
8. ಕೋವಿದನಲ್ಲದಿದ್ದರೂ ಲಲಿತ ವಿದ್ಯೆಗಳನ್ನು ಕಲಿತಿರುವವ ಈತ 4
9. ಬೇರೆ ಯಾವುದಾದರೂ ಏಕೆ? ಆಕಾರವೇ ಹೆದರಿಕೆ ಹುಟ್ಟಿಸುವಂತಿದೆ 4
10. ಪದ್ಧತಿ ಏನೇ ಇರಲಿ; ಹಣದ ಒಡೆಯನಂತೂ ಕುಬೇರ ತಾನೇ? 4
12. ಭಜನೆಗೇಕೆ ಬರಲಿಲ್ಲ? ಆತ ಎಲ್ಲವನ್ನೂ ಭಾಗ ಮಾಡುವವ 3
14. ಆ ಮಂದಾರ ಕುಸುಮದ ಅಂದ ಅಮಲು ಬರಿಸುವಂತಿದೆ 3
15. ಮುಂದಕ್ಕೇನು ಮಾಡಲಿದ್ದಾನೆ ಆ ವೃದ್ಧ ವ್ಯಕ್ತಿ? 3
16. ಮನಸು ಬದಲಾಗುವಂತೆ ಮಾಡಿದ್ದು ಇದೇ ಸುಂದರ ಹೂವು 3

## 04—01—2024 ಉತ್ತರಗಳು

**ಎಡದಿಂದ ಬಲಕ್ಕೆ**

1. ಅವನತಿ 3. ದಹನ 4. ರುಜಿನ 6. ದಣಾಯಕ 8. ಕನವರ 10. ತಿರುಗಿಸು 12. ಮಾಸಾಶನ 16. ಕಿಶೋರ 17. ವರ್ಧನೆ 18. ಕಳಕಳಿ

**ಮೇಲಿನಿಂದ ಕೆಳಕ್ಕೆ**

1. ಅನನ್ಯ 2. ತಿರುಕ 3. ದಡಿಯ 5. ನಮನ 6. ದಮಯಂತಿ 7. ಕರಗಿಸು 8. ಕಸಿನಮಾ (ಮಾನಸಿಕ ತಲೆಕೆಳಗು) 9. ರಸಪಾನ 11. ಗಿಲಕಿ 13. ಸಾಧನೆ 14. ತಾರಕ 15. ಜವಳಿ

ಪ್ರಶ್ನಾಂಕಣ

# ಮನೆ ಬೆಕ್ಕು: ವಿನಾಶಕಾರಿ ಹೌದೇ?

ಮನೆ ಬೆಕ್ಕು ಅದರ ವೈಜ್ಞಾನಿಕ ಹೆಸರು ಫೆಲಿಸ್ ಕ್ಯಾಟಸ್ (felis catus). ನಾಯಿಯ ನಂತರ ಅದೇ ಅತ್ಯಂತ ಜನಪ್ರಿಯ ಮುದ್ದಿನ ಸಾಕುಪ್ರಾಣಿ (Pet Animal). ಹುಲಿಯಿಂದ ಆರಂಭವಾಗಿ ಮನೆ ಬೆಕ್ಕಿನವರೆಗೆ ಪ್ರಸ್ತುತ ಬೆಕ್ಕುಗಳಲ್ಲಿ ಒಟ್ಟು 41 ಪ್ರಭೇದಗಳಿವೆ. ಆ ಪೈಕಿ ಎಂಟು ಪ್ರಭೇದಗಳನ್ನು (ಹುಲಿ, ಸಿಂಹ, ಚಿರತೆ, ಚೀತಾ, ಜಾಗ್ವಾರ್, ಹಿಮ ಚಿರತೆ, ಪ್ಯೂಮಾ ಮತ್ತು ಕ್ಲೌಡೆಡ್ ಲೆಪರ್ಡ್) ದೊಡ್ಡ ಬೆಕ್ಕುಗಳೆಂದೂ (Big Cats) ಉಳಿದ 33 ಪ್ರಭೇದಗಳನ್ನು ಚಿಕ್ಕ ಬೆಕ್ಕುಗಳೆಂದೂ (Small Cats) ವರ್ಗೀಕರಿಸಲಾಗಿದೆ (ನೋಡಿ: ಸುಧಾಪ್ರಶ್ನಾಂಕಣ: 20.10.2022). ಈ ಚಿಕ್ಕ ಬೆಕ್ಕುಗಳ ಗುಂಪಿಗೇ ಮನೆ ಬೆಕ್ಕು ಕೂಡ ಸೇರಿದೆ (ಚಿತ್ರ 1 ನೋಡಿ).

ಆದರೆ ವಿಪರ್ಯಾಸ ಏನೆಂದರೆ, ಅದೆಷ್ಟೇ ಮುದ್ದಿನ ಪ್ರಾಣಿಯಾಗಿದ್ದರೂ ಮನೆ ಬೆಕ್ಕು ಇತರ ಸಾವಿರಾರು ಪ್ರಾಣಿಗಳ ಪಾಲಿಗೆ ಭಯಂಕರ ಬೇಟೆಗಾರ ಆಗಿ ಶತ್ರುವೇ ಆಗಿದೆ! ವಾಸ್ತವವಾಗಿ ಇಲಿಯಂಥ ಕೆಲವೇ ಪಿಡುಗುಕಾರಕಗಳ ಸಂಖ್ಯಾ ನಿಯಂತ್ರಣಕ್ಕೆ ನೆರವಾಗುತ್ತಿದೆಯಾದರೂ ಈ ಬೇಟೆಗಾರನಿಂದ ಅಲ್ಪಸಂಖ್ಯಾತರಾಗಿರುವ ಮತ್ತು ಅಳಿದೇ ಹೋಗಿರುವ ಪ್ರಾಣಿ ಪ್ರಭೇದಗಳು ಹೇರಳ. 2021ರಲ್ಲಿ ಮನೆ ಬೆಕ್ಕುಗಳಿಂದ ವಿನಾಶಗೊಳ್ಳುತ್ತಿರುವ ಪ್ರಾಣಿ ಪ್ರಭೇದಗಳನ್ನು ಪತ್ತೆಹಚ್ಚುವ ಸಂಶೋಧನಾ ಕಾರ್ಯವನ್ನು ಜೀವ ವಿಜ್ಞಾನಿಗಳ ತಂಡವೊಂದು ಆರಂಭಿಸಿತ್ತು. ಆ ಅಧ್ಯಯನದ ಫಲಿತಾಂಶಗಳು ಯಾರನ್ನೇ ಆದರೂ ದಂಗುಬಡಿಸುವಂತಿವೆ! ನೀವೇ ಗಮನಿಸಿ:

ಮನೆ ಬೆಕ್ಕುಗಳ ಬೇಟೆಗೆ ಬಲಿಯಾಗುತ್ತಿರುವ ಪ್ರಾಣಿ ಪ್ರಭೇದಗಳ ಸಂಖ್ಯೆ ಒಟ್ಟು 2083! ಆ ಪೈಕಿ ಪಕ್ಷಿ ಪ್ರಭೇದಗಳು 981; ಸರೀಸೃಪ ಪ್ರಭೇದಗಳು 463; ಸ್ತನಿವರ್ಗದ ಪ್ರಭೇದಗಳು 431; ಉಭಯವಾಸಿ ಪ್ರಭೇದಗಳು 57; ಕೀಟಗಳು 119 ಪ್ರಭೇದಗಳು; ಸಂಧಿಪದಿಗಳು, ಶತಪದಿಗಳು, ಗ್ಯಾಸ್ಟ್ರೋಪಾಡ್ ಇತ್ಯಾದಿ 22 ಪ್ರಭೇದಗಳು. ಪ್ರತಿಷ್ಠಿತ ಸ್ಮಿತ್ಸೋನಿಯನ್ ಸಂಸ್ಥೆಯ ಪ್ರಕಾರ ಮನೆಬೆಕ್ಕುಗಳು ಪ್ರತಿ ವರ್ಷ ಸುಮಾರು 400 ಕೋಟಿ ಹಕ್ಕಿಗಳನ್ನು, 1300 ಕೋಟಿ ಪುಟ್ಟ ಸ್ತನಿಗಳನ್ನು ತಿಂದುಹಾಕುತ್ತಿವೆ!

ಮನೆ ಬೆಕ್ಕುಗಳು ಧರೆಯಲ್ಲಿ ವಿಪರೀತ ಬೃಹತ್ ಸಂಖ್ಯೆಯಲ್ಲಿವೆ; ಮನುಷ್ಯರ ಜೊತೆಗೇ ಸಾಗಿ ಎಲ್ಲೆಡೆ ಹರಡಿವೆ. ವೈಜ್ಞಾನಿಕ ಅಂದಾಜಿನ ಪ್ರಕಾರ ಪೃಥ್ವಿಯಲ್ಲಿ ಪ್ರಸ್ತುತ ಕನಿಷ್ಠ 100 ಕೋಟಿ ಬೆಕ್ಕುಗಳಿವೆ. ಆ ಪೈಕಿ 10 ಕೋಟಿ ಬೆಕ್ಕುಗಳು ಅಡವಿ, ಮರುಭೂಮಿ ಇತ್ಯಾದಿ ಅವುಗಳ ನೈಸರ್ಗಿಕ ನೆಲೆಗಳಲ್ಲೇ ಉಳಿದಿವೆ; 50 ಕೋಟಿ ಬೆಕ್ಕುಗಳು ಮನುಷ್ಯರ ಊರು ಕೇರಿಗಳ ಒಳಗೂ ಹೊರಗೂ ಹರಡಿ ಸ್ವಚ್ಛಂದವಾಗಿ ಬದುಕುತ್ತಿವೆ; 40 ಕೋಟಿ ಬೆಕ್ಕುಗಳು ಮನುಷ್ಯರ ಮನೆಗಳನ್ನು ಪ್ರವೇಶಿಸಿವೆ. ಅವುಗಳ ಒಂದು ಭಾಗ ಮುದ್ದಿನ ಸಾಕುಪ್ರಾಣಿಗಳಾಗಿವೆ. ಅಮೆರಿಕ ಒಂದರಲ್ಲೇ 74 ದಶಲಕ್ಷ ಪೆಟ್ ಬೆಕ್ಕುಗಳಿವೆ; ನಮ್ಮಲ್ಲಿರುವ ಪೆಟ್ ಬೆಕ್ಕುಗಳ ಸಂಖ್ಯೆ 55 ಲಕ್ಷ! ಎಲ್ಲೇ ಇದ್ದರೂ ಎಲ್ಲ ಬೆಕ್ಕುಗಳೂ ವಿನಾಶಕಾರಿಯಾಗಿವೆ.



■ ಎನ್. ವಾಸುದೇವ್